(ಶ್ರೀ ಎಸ್. ಗೋಪಾಲಗೌಡ)

ಸಾಕಾಗುತ್ತದೆ. ನನ್ನ ಅನುಭವದಲ್ಲಿ ನಡೆದದ್ದೇ ಹೇಳುತ್ತೇನೆ. ನನಗೆ ಒಂದು ಸಲ ಒಬ್ಬ ಮನುಷ್ಯ ಸಿಕ್ಕಿದ ನಾನು ಪ್ರತಿ ಸಲವೂ ಮರೆತು ಸಿಗರೇಟು ಹಚ್ಚುವುದು, ಆತ ಪ್ರತಿಸಲವೂ, ನೀವು ಹೊರಗೆ ಹೋಗಿ ಸೇದಿ ಅನ್ನುವುದು. ಅದಕ್ಕೆ ನಾನು ಸಿದ್ದನಿದ್ದೆ. ಆದರೆ ಮರೆತುಬಿಟ್ಟು ಸಿಗರೇಟು ಹಚ್ಚುತ್ತಿದ್ದೆ. ನಾನು ಎಷ್ಟೋ ಜನ ಹೆಣ್ಣು ಮಕ್ಕಳ ಮಧ್ಯೆ ಬೀಡಿ, ಸಿಗರೇಟು ಸೇದಿದ್ದೇನೆ. ಅವರು ಬೇಜಾರು ಮಾಡಲಿಲ್ಲ. ಈಗ ಸೇದುವುದು ಸಭ್ಯತೆಯ ಒಂದು ಕುರುಹು ಆಗಿದೆ. ಸಭ್ಯ ಮನುಷ್ಯ ಅಂದರೆ ಸೇದುತ್ತಾನ ಅಂತ. ನಮಗೆ ಸೇದುವವರಿಗೆ ಬಹಳ ಕೊಡಲಬಟು ಆಯಿತು ಇದರಿಂದ ಅಷ್ಟು ಇಷ್ಟು ಕಷ್ಟ ಅಲ್ಲ.

ನನ್ನ ವಿರುದ್ಧವೇನೆಂದರೆ, ಈ 50 ರೂಪಾಯಿ ಜಾಸ್ತಿಯಾಯಿತು. ಮಾನ್ಯ ಕೇಶವಮೂರ್ತಿ ಗಳು ಹೇಳಿದ ಹಾಗೆ ಒಬ್ಬ ಬಡವ ತಿಂಗಳು ದುಡಿದದ್ದನ್ನೆಲ್ಲಾ, ಸಂಜೆ ಒಬ್ಬ ನಿಷ್ಕಾವಂತ ಪೋಲೀಸಿನವರ ಕೈಗೆ ಸಿಕ್ಕಿಹಾಕಿಕೊಂಡು ಬಿಟ್ಟರೆ, ಜುಲ್ಮಾನೆಯಾಗಿ ಕೊಟ್ಟುಬಿಡಬೇಕಾಗುತ್ತದೆ. ಡಿಸ್ಟ್ರಿಕ್ಟ್‌ಗಾಗಿ ಕಾನೂನು ಪರಿಪಾಲನೆ ಮಾಡಬೇಕೆಂದು ನಿಂತಿರುತಕ್ಕಂಥ ಪೋಲೀಸಿನವರು ಇರುತ್ತಾರೆ. ಆದರೆ ಅವರು ಅಷ್ಟು ಕಟ್ಟುನಿಟ್ಟಾಗಿದ್ದರೆ, ಬಹಳ ದಿವಸ ಆ ಡ್ಯೂಟಿಯಲ್ಲಿ ಇರುವುದಿಲ್ಲ. ಅದು ಬೇರೆ ಮಾತು. ಇಂಥ ಸಣ್ಣ ವಿಷಯಗಳಲ್ಲಿ ಕಂಡೂ ಕಾಣದ ಹಾಗೆ ಇರಬೇಕು. ಈ ಕಡೆ ಸೇದುತ್ತಿದ್ದರೆ ಆಕಡೆ ಮುಖ ತಿರುಗಿಸಿಕೊಳ್ಳಬೇಕು; ಆಕಡೆ ಸೇದುತ್ತಿದ್ದರೆ ಈಕಡೆ ತಿರುಗಿಸಿಕೊಳ್ಳಬೇಕು. ಆದ್ದರಿಂದ ಹೇಗಿದ್ದರೂ ತಿದ್ದುಪಡಿಗಳನ್ನು ಕೊಡುವುದಕ್ಕೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ.

ಅಧ್ಯಕ್ಷರು.—ಇಲ್ಲ, ಇಲ್ಲ ಇಷ್ಟರವರೆಗೆ ಯಾವುದು ಬಂದಿದೆಯೋ ಅಷ್ಟೇ.

ಶ್ರೀ ಎಸ್. ಗೋಪಾಲ ಗೌಡ —ನನ್ನ ದೃಷ್ಟಿಯಿಂದ ಪನಿಷ್‌ಮೆಂಟಿಗೆ ಅಂದರೆ ಸೇದುವವನ್ನು ಹೊರಗೆ ಹೋಗು ಅಂದರೆ ಸಾಕು. ನನ್ನನ್ನು ಹೊರಗೆ ಹೋಗು ಅಂದರೆ, ನನಗೆ ಪ್ರಾಣ ಹೋದಹಾಗೆ ಆಗುತ್ತದೆ ಈ No smoking ಬೋರ್ಡು ಹಾಕಬೇಕೆಂದು ಹೇಳಿರುತ್ತೀರ. ಈ ನಾಲ್ಕನೆಯ ಪ್ಲಾನ್ ಪ್ರಕಾರ ಈ ಬೋರ್ಡು ಹಾಕಿದ್ದವನಿಗೂ ಶಿಕ್ಷೆ, ಬೀಡಿ, ಚುಟ್ಟ ವಗೈರೆ ಅಲ್ಲಿ ಸೇದುತ್ತಿರುವವನಿಗೂ ಶಿಕ್ಷೆ. ಇದಕ್ಕೆ 50 ರೂಪಾಯಿ ಜುಲ್ಮಾನೆ ಹಾಕುವುದೆಂದರೆ ಬಹಳ ಜಾಸ್ತಿ. ಇದನ್ನು ಯಾರೋ ಸೇದುವ ಅಭ್ಯಾಸವಿಲ್ಲದೆ ಇರುವವರು, ಸಿಗರೇಟು, ಹೊಗೆಸೊಪ್ಪು ಉಪಯೋಗಿಸುವವರ ವಿರುದ್ಧ ತಂದಿದ್ದಾರೋ ಎಂದು ಭಯ ಬರುತ್ತಿದೆ. ಇದರಿಂದ ಆರ್ಥಿಕವಾಗಿ ದೇಶಕ್ಕೆ ಆಗಿರುವ ದುಷ್ಪರಿಣಾಮಗಳು ಏನು ಅನ್ನುವುದನ್ನು ಸರ್ಕಾರದವರು ಯೋಚನೆ ಮಾಡಿದಂತೆ ಕೂಡ ಕಾಣಿಸುವುದಿಲ್ಲ ಎಂದು ನನಗೆ ಅನ್ನಿಸುತ್ತದೆ. ಈ ತರಹ ಶಿಕ್ಷೆಯನ್ನು ವಿಧಿಸಿದರೆ, ಸೇದತಕ್ಕಂಥ ಜನರೆಲ್ಲರೂ, ಸೇದದೆ ಇರುವವರ ದೃಷ್ಟಿಯಲ್ಲಿ ಅಪರಾಧಿಗಳು, ಇವರು ನಮ್ಮನ್ನು ಕಡೆಗಾಣಿಸುವುದೇ ಸರಿ. ಈ ಸೇದುವುದರಲ್ಲಿ ಏನೋ ಒಂದು ಉಪಶಾಂತಿ ಇರಬೇಕು, ಇಲ್ಲದಿದ್ದರೆ ಇಷ್ಟು ಜನರು ಸೇದುವುದಕ್ಕೆ ಕೈಹಾಕ ತ್ತಾ ಇರಲಿಲ್ಲ, ಇದರಿಂದ ಎಷ್ಟು ಹಣ ಖರ್ಚು, ಕಾಲವ್ಯರ್ಥ ಶರೀರಕ್ಕೂ ಅನೇಕ ಸಲ ತೊಂದರೆಗಳಿವೆ, ಕ್ಯಾನ್ಸರ್ ರೋಗ ಕೂಡ ಬರುತ್ತದೆ ಅಂತ ಹೆದರಿಸುತ್ತಾರೆ.

---

6 P.M.

HALF-AN-HOUR DISCUSSION ON QUESTION No. 732.

Re-Amount of loan and grant given to Kasturba Khadi Gramodyog Sangha Ltd., Jayanagar, Bangalore.

Mr. SPEAKER.—May I suggest one thing ? There are three names and if all the three Hon'ble Members want to talk, I have no objection. If they take more time, there may be less time for the Hon'ble Minister to reply. However, the discussion must close by half an-hour.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸಭಾಪತಿಯವರೇ ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಆಶ್ರಯದಲ್ಲಿ ನಾಯಿ ಕೊಡೆಗಳಂತೆ ಬೆಳೆದುಕೊಂಡು ಬಂದಿರತಕ್ಕ ಕೆಲವಾರು ಸಣ್ಣ ಪುಟ್ಟ ಕುಟ್ಟಾಣದ ಅಕ್ಕಿಯ ಸಹಕಾರ ಸಂಘಗಳ ಬಗ್ಗೆ, ಒಂದು ಸೂಚನೆಯನ್ನೂ ನಾನು ಮತ್ತು ನನ್ನ ಸ್ನೇಹಿತರು ಈ ಸಭೆಯ ಗಮನವನ್ನು ಸೆಳೆಯಬೇಕೆನ್ನುವ ದೃಷ್ಟಿಯಿಂದ ಸೂಚಿಸಿದ್ದೇವೆ.

ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಬಗ್ಗೆ ಈಗಾಗಲೇ ಈ ಸಭೆಯೊಳಗೆ ಮತ್ತು ಹೊರಗೆ ಅಲ್ಲ ನಡೆದಿರಬಹುದಾದಂಥ ಹಲವಾರು ಅಕ್ರಮಗಳ ಬಗ್ಗೆ ಮತ್ತು, ಅಲ್ಲ

ನಡೆದಿರಬಹುದಾದಂತ ಹಲವಾರು ಅವ್ಯವಹಾರಗಳ ಬಗ್ಗೆ ನಾವು ಸರ್ಕಾರದವರ ಮತ್ತು ಪ್ರಜೆಗಳ ಗಮನವನ್ನು ಸೆಳೆದಿದ್ದೇವೆ. ಈಗ ಕೆಲವು ದಿವಸಗಳ ಹಿಂದೆ ಈ ಶಾಸನ ಸಭೆಯಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಬಂಧಪಟ್ಟಂಥಾ ನೇಕಾರರ ಕೇಂದ್ರ ಸಹಕಾರ ಸಂಘದಲ್ಲಿ ನಡೆದಿರತಕ್ಕ ಹಲವಾರು ಅನುಚಿತ ಕ್ರಮಗಳನ್ನೂ ನಾವು ಸಭೆಯ ಮುಂದೆ ಇಟ್ಟೆವು. ಇದು ನಮ್ಮ ದೇಶದ ದುರದೃಷ್ಟದ ಮಾತಾಗಿದೆ ಎಂದು ನಾನಾದರೂ ಕರೆಯಬೇಕಾಗಿದೆ. ನಮ್ಮ ದೇಶದ ಜನಗಳ, ಸಮಾಜದ ಆರ್ಥಿಕ ರೂಪುರೇಖೆಗಳನ್ನೂ ಬದಲಾವಣೆ ಮಾಡುವುದಕ್ಕೆ ಏನು ಸಹಕಾರ ಮಂತ್ರವನ್ನೂ ಉಪಯೋಗ ಮಾಡಬೇಕೆಂದು ನಾವೆಲ್ಲರೂ ಆಸೆ ಮಾಡಿ ಅದನ್ನೂ ನಡೆಸಿಕೊಂಡು ಬರುತ್ತಿದ್ದೇವೆ. ಆದರೆ ಅದಕ್ಕೆ ಧಕ್ಕೆ ಬರತಕ್ಕ ರೀತಿಯಲ್ಲಿ; ಅದನ್ನು ಕುಂಠಿತಗೊಳಿಸತಕ್ಕ ರೀತಿಯಲ್ಲಿ ಕೆಲವು ಸಹಕಾರ ಸಂಘಗಳು ಬೆಂಗಳೂರು ನಗರದಲ್ಲಿ ಹುಟ್ಟಿಕೊಂಡು ನಮ್ಮ ರಾಜ್ಯದ ಬೇಕಾದಷ್ಟು ಹಣ ಪೋಲಾಗಿರತಕ್ಕ ವಿಚಾರದತ್ತ ಮಾನ್ಯ ಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

ಈ ಪ್ರಶ್ನೆ ಉದ್ಭವವಾದುದು ಜಯನಗರದಲ್ಲಿರುವ ಕಸ್ಟೂರಿಬಾ ಖಾದಿ ಗ್ರಾಮೋದ್ಯೋಗ ಸಂಘದ ವಿಚಾರದಲ್ಲಿ. ಇದಕ್ಕೆ ಸರ್ಕಾರದವರು, ಖಾದಿ ಮತ್ತು ಗ್ರಾಮೋದ್ಯೋಗ ಸಂಘದವರು ಎಷ್ಟು ಹಣವನ್ನು ಸಾಲವಾಗಿ ಕೊಟ್ಟಿದ್ದಾರೆ, ಎಷ್ಟು ಹಣವನ್ನು ಅದಕ್ಕೆ ಗ್ರಾಂಟ್ ರೂಪದಲ್ಲಿ ಕೊಟ್ಟಿದ್ದಾರೆ ಎನ್ನುವ ವಿಚಾರದಲ್ಲಿ ನಾವು ಪ್ರಶ್ನೆ ಮಾಡಿದೆವು. ಆ ಪ್ರಶ್ನೆಗೆ ಉತ್ತರಿಸುವ ಸಮಯದಲ್ಲಿ ಮಾನ್ಯ ಮಂತ್ರಿಗಳು ಏನು ಅಭಿಪ್ರಾಯ ಪಟ್ಟರೋ ಆ ಅಭಿಪ್ರಾಯದೊಡನೆ ನಮ್ಮ ಸಂಪೂರ್ಣವಾದ ಒಪ್ಪಿಗೆ ಇತ್ತು. ಅದೇ ಜಾತಿಯ ಮತ್ತೊಂದು ಸಹಕಾರ ಸಂಘ ಬೆಂಗಳೂರು ನಗರದಲ್ಲಿದೆ ಅದು ಮಹಿಳಾ ಕಾರ್ಮಿಕರ ಸಂಘ... ..

Mr. SPEAKER.—The Hon'ble Member will have to refer to this Sangha alone and no other. It is not a general discussion.

ಶ್ರೀ ಎಸ್. ಎಂ. ಕೃಷ್ಣ.—ಹೌದು ಸ್ವಾಮಿ, ಇವುಗಳೆಲ್ಲವೂ ಕೂಡ ಒಂದಕೊಂದಕ್ಕೆ ಹತ್ತಿರ ಸಂಬಂಧವನ್ನೂ ಹೊಂದಿವೆ.

Mr. SPEAKER.—On another appropriate occasion. Today, during the course of the half-an-hour debate, it is limited to this Sangha.

ಶ್ರೀ ಎಸ್. ಎಂ. ಕೃಷ್ಣ.—ಜಯನಗರದ ಇಂಥ ಸಂಘಗಳಿಗೆ ಪುರಸ್ಕಾರ ಕೊಡತಕ್ಕದ್ದು ಮತ್ತು ಇಂಥ ಸಂಘಗಳಿಗೆ ಉತ್ತೇಜನ ಕೊಡತಕ್ಕದ್ದು ಮುಖ್ಯವಾಗಿ ಖಾದಿ ಮತ್ತು ಗ್ರಾಮೋದ್ಯೋಗ ಸಂಘಕ್ಕೆ ಸೇರಿದಂಥ ಜವಾಬ್ದಾರಿ. ಕೇವಲ ಹಣವನ್ನು ಇಂಥ ಸಂಘಗಳಿಗೆ ಒದಗಿಸುವುದರಿಂದಲೇ ಆ ಜವಾಬ್ದಾರಿ ಮುಗಿಯುವುದಿಲ್ಲ. ಆ ಜವಾಬ್ದಾರಿ ಇನ್ನು ನಾರ್ಕಾರು ಹೆಜ್ಜೆಗಳು ಮುಂದೆ ಹೋಗಬೇಕು. ನಾವು ಏನು ಧ್ಯೇಯ ಉದ್ದೇಶಗಳನ್ನಿಟ್ಟುಕೊಂಡು ಇಂಥ ಸಹಕಾರ ಸಂಘಗಳಿಗೆ ಅವಕಾಶ ಮಾಡಿಕೊಟ್ಟಿದ್ದೇವೆಯೋ, ಏನೊಂದು ಗುರಿಯನ್ನಿಟ್ಟುಕೊಂಡು ಸಹಕಾರ ಸಂಘದ ವಿಧೇಯಕಕ್ಕೆ ನಾವು ಇವತ್ತು ನಮ್ಮ ಸಮ್ಮತಿಯನ್ನು ಕೊಟ್ಟಿದ್ದೇವೆಯೋ ಆ ಗುರಿಯನ್ನು ಸಾಧನೆ ಮಾಡುವುದರಲ್ಲಿ ಈ ಸಹಕಾರ ಸಂಘಗಳು, ಈ ಜಾತಿಯ ಸಹಕಾರ ಸಂಘಗಳು ಏನಾದರೂ, ಕೊಂಚ ಮಟ್ಟಿಗಾದರೂಕೂಡ ಆ ಗುರಿಯನ್ನು ಮುಟ್ಟುವುದಕ್ಕೆ ಇವು ಅನುಕೂಲ ಮಾಡಿಕೊಟ್ಟಿದೆಯೇ ಎನ್ನುವ ಪ್ರಶ್ನೆಯನ್ನು ನಾವು ಶಾಸನಕರಾಗಿ ಎದುರಿಸಬೇಕಾಗಿದೆ.

ನಾನು ಕೇವಲ ಈ ಒಂದು ಸಂಘದ ಬಗ್ಗೆ ಮಾತ್ರ ಪ್ರಸ್ತಾಪ ಮಾಡಬೇಕಾಗಿದೆ. ನಾನು ತಿಳಿದಿರುವ ಮಟ್ಟಿಗೆ ಈ ಸಂಘ ಏನು ಕೆಲಸ ಮಾಡಿದೆ, ಈ ಸಂಘದಲ್ಲಿ ಎಷ್ಟರ ಮಟ್ಟಿನ ಅಕ್ರಮಗಳು ನಡೆದಿವೆ, ಎಷ್ಟರ ಮಟ್ಟಿಗೆ ಅವ್ಯವಹಾರಗಳು ನಡೆದಿವೆ ಎನ್ನುವ ವಿಚಾರದಲ್ಲಿ ಒಂದು ಮಾತನ್ನು ಹೇಳ ಬಯಸುತ್ತೇನೆ. ಮುಖ್ಯವಾಗಿ ಪ್ರತ್ಯಕ್ಷವಾಗಿ ಈ ಸಂಘದವರ್ಯಾಗಲೀ ಅಥವಾ ಈ ಜಾತಿಯ ಇನ್ನು ಯಾವುದಾದರೂ ಒಂದು ಸಂಘದಲ್ಲಿ ಅಗಲಿ ಏನಾದರೂ ಅಕ್ರಮಗಳು ನಡೆದಿದ್ದರೆ ಆ ಅಕ್ರಮಗಳ ಸಂಪೂರ್ಣ ಜವಾಬ್ದಾರಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಸೇರಿದ ಜವಾಬ್ದಾರಿ. ಕಳೆದ ಮೂರು ನಾಲ್ಕು ವರ್ಷಗಳಿಂದ ಇಂಥ ಜಾತಿಯ ಸಂಘಗಳು ಜಯನಗರದರ್ಯಾಗಲಿ, ಬನಶಂಕರಿ ಗುಡಿಯರ್ಯಾಗಲಿ ಎಲ್ಲಿ ಹುಟ್ಟಿದ್ದರೂಕೂಡ ಖಾದಿ ಮತ್ತು ಗ್ರಾಮೋದ್ಯೋಗ ಸಂಘದವರು ಎಷ್ಟರ ಮಟ್ಟಿಗೆ ಅದರ ರೆಕ್ಕೆ ಪತ್ರಗಳನ್ನು ಮತ್ತು ಅವುಗಳನ್ನು ಇಟ್ಟು ಕೊಂಡಿರತಕ್ಕ ರೀತಿಯನ್ನು ನೋಡುತ್ತಿದ್ದಾರೆ ಮತ್ತು ಅಲ್ಲರತಕ್ಕ ಷೇರುದಾರರು ಯಾವ ರೀತಿಯ ಕಾರ್ಯ ಕ್ರಮಗಳನ್ನು ನಡೆಸುತ್ತಿದ್ದಾರೆ ಎಂಬುದನ್ನು ನೋಡಬೇಕು. ಈ ಸೊಸೈಟಿಯ ಉದ್ದೇಶ ಪತ್ರವನ್ನು ಕುಟ್ಟಿ. ಅಕ್ಕಿಯನ್ನು ಮಾಡಿ ಎಲ್ಲರಿಗೂ ಹಂಚಬೇಕು, ಸೆಂಟ್ರರ್ ಜೈಲು ಮತ್ತು ಆನ್ವತ್ರಗಳಿಗೂ ಹಂಚಬೇಕು ಎನ್ನುವುದಾಗಿದೆ. ಈಗಿನ ಇಪ್ಪತ್ತನೆಯ ಶತಮಾನದಲ್ಲಿ ಅಂತರಿಕ್ಷಕ್ಕೆ ಹೋಗಿ ಚಂದ್ರಗ್ರಹ, ಸೂರ್ಯಗ್ರಹ ಮತ್ತು ಇತರ ಗ್ರಹಗಳನ್ನು ಸಂದರ್ಶಿಸಬೇಕು ಎಂದು ಹೇಳುವುದನ್ನು ನೋಡುತ್ತೇವೆ. ಇಂಥದ್ದರಲ್ಲಿ ಕೊಟ್ಟಣದ

(ಶ್ರೀ ಎಸ್. ಎಂ. ಕೃಷ್ಣ)

ಅಕ್ಕಿ ಮಾಡುತ್ತೇವೆ, ಒಂದು ಸಂಘವನ್ನು ಬೆಳಸಿಕೊಂಡು ಬರುತ್ತೇವೆ ಎಂದು ಹೇಳಡಕ್ಕವಾದ ಒಂದು ಕಡೆ ಇದೆ. ಒಟ್ಟಿನಲ್ಲಿ ಇಂಥ ಸಂಘಗಳು ಇವತ್ತಿನ ಕಾಲಕ್ಕೆ ಅನುಗುಣವಾಗಿಲ್ಲ. ಈ ಸಂಘಗಳು ನಡೆಯುತ್ತಿರುವ ರೀತಿ ಯಾದರೂ ನಮಗೆ ಒಂದು ದೊಡ್ಡ ಶಂಕೆ, ಮತ್ತು ಅನುಮಾನಕ್ಕೆ ಅವಕಾಶ ಮಾಡಿಕೊಟ್ಟಿವೆ. ಖಾದಿ ಮತ್ತು ಗ್ರಾಮೋದ್ಯೋಗ ಸಂಘದಲ್ಲಿ ದೊಡ್ಡ ರಾದ್ಧಾಂತವಾಗಿದೆ, ಅದರಲ್ಲ ಬಹಳ ಅಕ್ರಮಗಳು ನಡೆದಿವೆ. ಇವೆಲ್ಲವೂಕೂಡ ವಂಶಪಾರಂಪರಗತವಾಗಿ ನಡೆದುಕೊಂಡು ಬಂದಿರ ತಕ್ಕ ಹವ್ಯಾಸಗಳು, ದುಶ್ಚಟಗಳು.....

Mr. SPEAKER.—If the Hon'ble Member generalises, it becomes embarrassing. Let the Hon'ble Member not create that situation. I am calling upon the Minister not to refer to any other Society. So far as half-an-hour Debate is concerned, the Hon'ble member must limit himself to this Society only.

ಶ್ರೀ ಎಸ್. ಎಂ. ಕೃಷ್ಣ.—ಆದುದರಿಂದ ಈ ಜಾತಿಯ ಸಂಘಗಳು ಎಷ್ಟರ ಮಟ್ಟಿಗೆ ಕೆಲಸ ಮಾಡಿವೆ ಮತ್ತು ತಮ್ಮ ಉದ್ದೇಶವನ್ನು ಈ ಸೊಸೈಟಿಗಳು ನಡೆಸಿಕೊಂಡು ಬರುತ್ತಿವೆ ಎನ್ನತಕ್ಕ ವಿಚಾರದಲ್ಲಿ ಸಾಕಾದಷ್ಟು ಸರ್ಕಾರ ತಮಗೆ ಸಮಾಧಾನವಾಗತಕ್ಕ ರೀತಿಯಲ್ಲಿ ಒಂದು ವಿಚಾರಣೆ ಯನ್ನು ನಡೆಸಬೇಕೆಂದು ನಾನು ಸೂಚನೆ ಮಾಡುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ನುಮಾರು ಐದು ಕೋಟಿ ರೂಪಾಯಿ ಗಳನ್ನು, ನಮ್ಮ ದೇಶದ ಜನರಿಂದ ವಸೂಲ್ಮಾಡಿದ ಹಣವನ್ನು.....

Mr. SPEAKER.—Where is this sum of Rs. 5 crores mentioned in this question ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ತರಹ ಉದ್ಯೋಗಗಳಿಗೆ ಕೊಟ್ಟು.....

Mr. SPEAKER.—I am not permitting general debate. The Hon'ble Member must confine himself to this question only. He can call it, Khadi Board or call it by any name, but should confine himself to the activities of this Society. All that I told the Hon'ble member Sri Krishna applies equally to Sri Revana siddappa also. Every minute of this half-an-hour is valuable. Let him use it to the best advantage.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬೆಂಗಳೂರಿನ ಜಯನಗರದಲ್ಲಿರುವ ಕನ್ಯೂರಿಬಾಯಿ ಖಾದಿ ಗ್ರಾಮೋದ್ಯೋಗ ಸಂಘದಲ್ಲಿ ಐದಾರು ಲಕ್ಷ ರೂಪಾಯಿ ಹೋಗಿದೆ ಆದುದರಿಂದ ಇದು ಬಹಳ ಪ್ರಾಮುಖ್ಯವಾದ ವಿಷಯ, ಇದರಲ್ಲಿ ಅನೇಕ ಸಂಗತಿಗಳನ್ನು ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಬತ್ತ ಬೆಳೆಯಲು ನೀರಿನ ಆಶ್ರಯವಿಲ್ಲ. ಕೊಟ್ಟಣ ಅಕ್ಕಿ ಇಲ್ಲಿ ಮಾಡಿಸುವುದು ಏತಕ್ಕೆ ? ನದಿ ನಾರೆ ಇದ್ದು ಹೇರಳವಾಗಿ ಬತ್ತ ಬಳೆಯುವ ಕಡೆ ಇದನ್ನು ಮಾಡಬಹುದು. ಬೆಂಗಳೂರು ಮಹಾ ನಗರದಲ್ಲಿ ನಾಗರೀಕ ಜನರು ಥಳಕಿನಲ್ಲಿ ಇರುವವರು ಹ್ಯಾಂಡ್ ಪೌಂಡೆಡ್ ಅಕ್ಕಿ ಉಪಯೋಗಿಸುವುದಿಲ್ಲ. ಹ್ಯಾಂಡೂ ಇಲ್ಲ ಹೌಂದೂ ಇಲ್ಲ. ಇಲ್ಲಿ ಯಾರು ಇಂಥ ಅಕ್ಕಿ ತಿನ್ನುತ್ತಾರೆ ? ಯಾರೋ ಕೆಲವರಿಗೆ ಜೀವನೋಪಾಯ ಒದಗಿಸಲು ಇದನ್ನು ಇಲ್ಲಿ ಮಾಡಿದ್ದೀರಿ. ಇದರಿಂದ ಏನೂ ಉಪಯೋಗವಿಲ್ಲ. ಐದು ಕೋಟಿ ರೂಪಾಯಿ ಬಡ ಜನರ ರಕ್ತ ನೂರೆ ಮಾಡುತ್ತಿರುವಾಗ್ಗೆ ಸ್ವಲ್ಪ ಯೋಚನೆ ಮಾಡ ಬೇಡವೇ ?

Mr. SPEAKER.—The Member is making alternative suggestions. That is not relevant. What are the misdeeds of the society is the one point for discussion here. That is all.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಷ್ಟು ಹಣ ಇಂಥ ಸೊಸೈಟಿ ನಲುವಾಗಿ ಖರ್ಚು ಮಾಡುವುದರ ಬದಲು ಗ್ರಾಮಾಂತರ ಪ್ರದೇಶದಲ್ಲ ಖರ್ಚು ಮಾಡುವುದು ಒಳ್ಳೆಯದು.

Mr. SPEAKER.—I will not disturb. I only direct the Hon'ble Minister not to answer anything except on this subject.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸೊಸೈಟಿಗೆ ಒಂದು ಲಕ್ಷ ರೂಪಾಯಿ ಸಾಲ ಕೊಟ್ಟಿದ್ದೀರಿ. ಬತ್ತ, ಸ್ಪಾಕ್ ಇಟ್ಟಿದ್ದಾರೆ. ಆದರೆ ಬೆಂಗಳೂರು ಸಿಟಿಯಲ್ಲಿ ಕೊಟ್ಟಣ ಅಕ್ಕಿ ಮಾರುವುದರಿಂದ ಏನೇನೂ ಗಿಟ್ಟುವುದಿಲ್ಲ. ಸರಕಾರ ಕೊಟ್ಟಿರತಕ್ಕ ಹಣ ದುರುಪಯೋಗವಾಗುತ್ತದೆ. ಇಂಥಾದ್ದಕ್ಕೆ ಪ್ರೋತ್ಸಾಹ ಕೊಡಬೇಡಿ. ಇದಕ್ಕೆ ಸಹಾಯ ಮಾಡುವುದು ಒಳ್ಳೆಯದಲ್ಲ. ಇಂಥಾದ್ದಕ್ಕೆ ಕ್ಯಾನವಾಸ್ಸಿಂಗ್ ನಡೆಯುತ್ತಿದೆ. ಗಾಣ ಕೈಗಾರಿಕೆ ಇವುಗಳಿಗೆ ಇನ್ನು ಮುಂದೆ ಅವಕಾಶ ಕೊಡದೆ ದಯೆ ಎಟ್ಟು ದಾನವಾದರೂ ಮಾಡಿ. ದಾನ ಕೊಟ್ಟಾದರೂ ಬಿಡಿ. ಸಾಮಾನ್ಯ ಜನ ತಮ್ಮ ದೇಶದಲ್ಲಿ ಅವಿದ್ಯಾವಂತರಾಗಿದ್ದಾರೆ. ಏನೋ ಮಾಯಾ ಮಾಟ ಮಾಡಿ ಬಿಟ್ಟು ಯಾರದೋ ಹೆಸರಲ್ಲಿ ಯಾರಿಗೋ ದುಡ್ಡು ಕೊಡುತ್ತಿದ್ದೀರಿ. ಇದು ಸರಿಯಲ್ಲ. ಇಂಥಾದ್ದನ್ನು ಸರಿಯಾಗಿ ತನಿಖೆ ಮಾಡಿಸಬೇಕು ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸ್ವಾಮಿ, ಈ ಪ್ರಶ್ನೆ ಸಭೆಯ ಮುಂದೆ ಬಂದಾಗ್ಗೆ ಕೆಲವು ಸಲಹೆ ಕೊಟ್ಟಿದ್ದೇವೆ. ಈಗಿನ ಸಂದರ್ಭಕ್ಕೆ ಅನುಸರಿಸಿ ಮಾತನಾಡಬೇಕಾಗಿದೆ. ಈ ಸಂಘದಲ್ಲಿ ಹೆಚ್ಚಿನ ಹಣದ ದುರುಪಯೋಗ ನಡೆದಿಲ್ಲ ಎಂದು ಗೊತ್ತಾಗಿದೆ. ಆದರೆ ಬೇರೆ ಸಂಘಗಳಲ್ಲಿ ಆದು ನಡೆದಿರಬಹುದು. ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ. ಈ ಕೊಟ್ಟಣ ಅಕ್ಕಿ ತಯಾರು ಮಾಡತಕ್ಕಂಥ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡತಕ್ಕಂಥ ಸಂಬಂಧಪಟ್ಟ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಈ ಸಂದರ್ಭದಲ್ಲಿ ವಿಷಾದದಿಂದ ಹೇಳುತ್ತೇನೆ. ಅನೇಕ ಅಧಿಕಾರಿಗಳು ಇದ್ದರೂಕೂಡ ಅವ್ಯವಹಾರ ನಡೆಯುತ್ತಿದೆ. ಒಂದು ಉದಾಹರಣೆ ಕೊಡಲು ಇಚ್ಛೈಪಡುತ್ತೇನೆ. ಆಡಳಿತ ಪರಿಶೀಲನೆ ಮಾಡಬೇಕಾಗಿದೆ. ಖಾದಿ ಬೋರ್ಡಿನಲ್ಲಿ ಯಾವ ಯಾವ ಕೈಗಾರಿಕೆಗಳು ನಡೆಯುತ್ತಿವೆಯೋ ಅವುಗಳ ಕಡೆ ಸರಿಯಾಗಿ ಗಮನ ಕೊಡುತ್ತಿಲ್ಲ. ಪ್ರತಿಯೊಬ್ಬ ಅಧಿಕಾರಿಯಿಂದ ರಾಜಕೀಯ ನಡೆಯುತ್ತಿದೆ. ಇನ್ನೂರು ಜನ ಕೆಲಸಗಾರರು ಇದ್ದರೂಕೂಡ ಆದರಲ್ಲಿ ಒಬ್ಬನೂಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ. ರಾಜಕೀಯದಲ್ಲಿ ನೊಂದಂಥ ಜನರನ್ನೂ ಅಂಟಿ ಕರಪ್ಷನ್ನಿನಲ್ಲಿ ಡಿಸ್‌ಮಿಸ್ ಆದಂಥವರನ್ನು ನೇಮಕ ಮಾಡಿಕೊಂಡಿದ್ದಾರೆ. ಅವರು ಏನು ಕೆಲಸ ಮಾಡುತ್ತಾರೆ! ಡಿಸ್‌ಮಿಸ್ ಆದವರು, ನೊಂದಂಥವರು ಸೇವೆ ನಲ್ಲಿಸುತ್ತಾರೆಯೇ! ಅಂಥವರ ಮೇಲೆ ಎಷ್ಟರ ಮಟ್ಟಿಗೆ ಹತೋಟಿ ಇಡಲು ಸಾಧ್ಯವಿದೆ! ಆದುದರಿಂದ ಇಂಥ ಅಧಿಕಾರಿಗಳಿಗೆ ಅವಕಾಶ ಕೊಡುವುದು ಸರಿಯಲ್ಲ. ಖಾದೀ ಬೋರ್ಡಿಗೆ ಸಂಬಂಧಪಟ್ಟವರು ಚೇರಮನ್ನರೇ ಆಗಲಿ, ಯಾರೇ ಆಗಲಿ, ಅಧಿಕಾರಿಗಳನ್ನು ನೇಮಕ ಮಾಡತಕ್ಕಂಥಾದ್ದರ ಬಗ್ಗೆ ಒಂದು ಆದೇಶ ಕೊಡಬೇಕು. ಇಲ್ಲಿಯವರೆಗೆ ಅವರು ಚೆನ್ನಾಗಿ ಕೆಲಸ ಮಾಡಿದ್ದರೆ ಇಷ್ಟು ಹೀನಸ್ಥಿತಿಗೆ ಇಂದು ಇದು ಹೋಗುತ್ತಿರಲಿಲ್ಲ. ಈ ಸಂಘದ ಬಗ್ಗೆ ವಿವರಣೆ ಕೊಡುವುದು ಸಾಧ್ಯವಿದೆ. ಅದನ್ನು ಒದಗಿಸಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ ಮಲ್ಲಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಬೆಂಗಳೂರಿನ ಜಯನಗರದಲ್ಲಿರುವ ಕಸೂರಿಬಾಯಿ ಖಾದಿ ಗ್ರಾಮೋದ್ಯೋಗ ಸಂಘದಲ್ಲಿ ಅವ್ಯವಹಾರ ನಡೆದಿದೆಯೇ ಎಂದು ಕೇಳಿದ ಪ್ರಶ್ನೆಗೆ ಸ್ಪಷ್ಟವಾಗಿ ಉತ್ತರ ಕೊಟ್ಟಿದೆ. ಯಾವ ರೀತಿ ಅವ್ಯವಹಾರ ನಡೆದಿಲ್ಲ ಎಂಬ ಬಗ್ಗೆ ಉತ್ತರ ಹೇಳಿದೆ. ಆದರೂಕೂಡ ಈ ಪ್ರಶ್ನೆಯ ಮೇಲೆ ಅರ್ಧ ಗಂಟೆ ಕಾಲ ಚರ್ಚೆ ನಡೆಸಬೇಕು ಎಂದು ಕೇಳಿದ್ದರಿಂದ ಇದು ಈ ಸಭೆಯ ಮುಂದೆ ಬಂದಿದೆ. ಮಾನ್ಯ ಸದಸ್ಯರು ಖಾದಿ ಬೋರ್ಡು ಮತ್ತು ಇತರ ಸೊಸೈಟಿಗಳ ವ್ಯವಹಾರ ಬಗ್ಗೆ ಮಾತ್ರ ಮಾತನಾಡಿದ್ದಾರೆ. ಆದರೆ ಈ ಸೊಸೈಟಿ ಬಗ್ಗೆ ಯಾವ ಆಕ್ಷೇಪಣೆ ಮಾಡಲಿಲ್ಲ. ಖಾದಿ ಬೋರ್ಡಿನ ಸೊಸೈಟಿಗಳೆಲ್ಲಾ ಸಮರ್ಪಕವಾಗಿ ಕೆಲಸ ಮಾಡುತ್ತಿವೆ ಎಂದು ನಾನು ಸಮರ್ಥಿಸುತ್ತೇನೆ. ಕೆಲವು ಸೊಸೈಟಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಈ ಸೊಸೈಟಿಯಲ್ಲಿ ತಾಂತ್ರಿಕ ಕೆಲಸ ಮಾಡತಕ್ಕಂಥವರು ಬಹಳ ಉತ್ಸಾಹೀ ಕೆಲಸಗಾರರಾಗಿದ್ದಾರೆ. ಸಂಚಾಲಕರು ಟೆಕ್ಸ್‌ಟೈಲ್ ಗ್ರಾಜ್ಯುಯೇಟ್ ಆಗಿದ್ದಾರೆ. ಕೆಲಸಗಾರರಲ್ಲಿ ಉತ್ಸಾಹೀ ಯುವಕರು ಮುಸಲ್ಮಾನರು, ಕ್ರಿಶ್ಚಿಯನ್ನರು ಎಲ್ಲಾ ಜಾತಿಯವರೂ ಇದ್ದಾರೆ. ನಾನಾ ಜಾತಿಯ 87 ಜನ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಸಮಾಜ ಸೇವೆ ಮಾಡಬೇಕೆಂಬ ಉದ್ದೇಶದಿಂದ ಈ ಸಂಘ ಸ್ಥಾಪನೆ ಮಾಡಿಕೊಂಡು ವಿದ್ಯಾವತಿಯಾಗಿರುವ ಯುವತಿಯರು ಸಮಾಜ ಸೇವೆ ಮಾಡುತ್ತಿದ್ದಾರೆ.

ಅಂತಹ ಒಂದು ಸೊಸೈಟಿಯ ಮೇಲೆ ಅಪಖ್ಯಾತಿ ತಂದರೆ ಸಮಾಜದಲ್ಲಿ ಈ ಕೆಲಸ ಮಾಡತಕ್ಕವರಿಗೆ ನಿರುತ್ಸಾಹ ಬರುತ್ತದೆ, ಜಗುಪ್ಸೆ ಬರುತ್ತದೆ, ಸರಿಯಾದವರು ಸಮಾಜ ಸೇವೆಗೆ ಬರದಿದ್ದರೆ ಸಮಾಜಕ್ಕೇ ತೊಂದರೆ. ಆದ್ದರಿಂದ ಇದನ್ನು ತರಬಾರದಾಗಿತ್ತು ಎಂದು ಬಹಳ ಬೇಸರದಿಂದ ಹೇಳುತ್ತೇನೆ. 87 ಜನ ಸದಸ್ಯರು ಇದ್ದಾರೆ, 18—19 ಜನ ಕೆಲಸ ಮಾಡತಕ್ಕವರು ಇದ್ದಾರೆ. ಬಿಲ್ಲು ಬತ್ತ ಕುಟ್ಟುತ್ತಾರೆ. ಆದನ್ನು ಅಜಮಾಯಿಷಿಮಾಡಿ ಆ ಸಂಬಂಧ ಕೊಟ್ಟಿರತಕ್ಕ ಆಡಿಟ್ ರಿಪೋರ್ಟ್‌ನ್ನೂ ಕೂಡ ಈ ಮಾನ್ಯ ಸಭೆಯ ಮುಂದೆ ಇಟ್ಟಿದ್ದೇನೆ. ಆದನ್ನು ಪರಿಶೋಧನೆಮಾಡಿ ನೋಡಿದರೆ ಅಲ್ಲಿನ ವ್ಯವಹಾರವೆಲ್ಲವೂ ಚೆನ್ನಾಗಿ ನಡೆದಿದೆ, ಕೊಟ್ಟಿರತಕ್ಕ ಅಕ್ಕಿ ಎಲ್ಲವೂ ವಿತರಣೆಯಾಗಿದೆ, ತೆಗೆದುಕೊಂ

(ಶ್ರೀ ಕೆ. ಮಲ್ಲಪ್ಪ)

ಸಾಲ ಕಾಲಕ್ಕೆ ಸರಿಯಾಗಿ ಪಾವತಿ ಮಾಡುತ್ತಾ ಬಂದಿದ್ದಾರೆ ಎಂದು ಗೊತ್ತಾಗುತ್ತದೆ. 5,013 ರೂಪಾಯಿ ಲಾಭಕೂಡ ನಂಪಾದನೆ ಮಾಡಿದ್ದಾರೆ 1962—63ರಲ್ಲಿ. ಖಾದೀ ಬೋರ್ಡಿಗೆ ಪಾವತಿ ಮಾಡಬೇಕಾದ ಹಣವನ್ನು ಕೂಡ ಸಕಾಲದಲ್ಲಿ ಪಾವತಿ ಮಾಡಿದ್ದಾರೆ, ಬತ್ತ ಸ್ಟಾಕ್ ಇಟ್ಟುಕೊಂಡಿದ್ದಾರೆ 1,07,865 ರೂಪಾಯಿಗಳಷ್ಟು. ಬತ್ತ ಇವತ್ತು ಸ್ಟಾಕ್‌ನಲ್ಲಿ ತೆಗೆದುಕೊಂಡು ಡಬ್ಬರ್ ಲಾಕ್‌ನಲ್ಲಿ ಇಟ್ಟಿದ್ದಾರೆ. ಆದ್ದರಿಂದ ಇವತ್ತು ಈ ಸೊಸೈಟಿಯಲ್ಲಿ ಅನಾಹುತ ನಡೆದಿಲ್ಲ. ಇದನ್ನು ತರಬಾರದಾಗಿತ್ತು. ಏಕೆಂದರೆ ಸೇವೆ ಮಾಡಬೇಕೆಂದು ವಿದ್ಯಾವತಿಯಾದ ಯುವತಿ ಸಂಘ ಸ್ಥಾಪನೆ ಮಾಡಿಕೊಂಡು ನಲ್ಲಿಸುತ್ತಾ ಇದ್ದಾಳೆ. ಆಕೆಗೆ ಸರಿತ್ಸಾಹ, ಜಗುಷ್ಟೆ ಬರುವಂತಾದರೆ ಯಾವ ಕೆಲಸ ತಾನೆ ಮಾಡುವುದಕ್ಕೆ ಸಾಧ್ಯವಿದೆ. ಮೊನ್ನೆ ಈ ಪ್ರಶ್ನೆ ಕೇಳಿದಾಗ ಆಕೆ ಇದನ್ನು ವಹಿಸಿಕೊಂಡು ಬಿಡಿ. ನನಗೆ ಇದರ ಕೆಲಸವೇ ಬೇಡ ಎಂದು ಹೇಳಿದಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಬಹುಶಃ ಅವರು ಇನ್ನಾವುದೋ ಸೊಸೈಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೇಳುತ್ತಿದ್ದಾರೆ ಎಂದು ಕಾಣುತ್ತದೆ.

ಶ್ರೀ ಕೆ. ಮಲ್ಲಪ್ಪ.—ಇಷ್ಟು ಹೇಳಿ ಇದರಲ್ಲಿ ರಾಜಕೀಯ ವ್ಯವಹಾರವೂ ನಡೆದಿಲ್ಲ ಎಂದು ಹೇಳಿ ಮುಗಿಸುತ್ತೇನೆ.

Mr. SPEAKER.—The House now adjourns and will meet to-morrow at 8-30 A.M.

The House adjourned at Twenty-five Minutes past Six of the Clock to meet again at Thirty Minutes past Eight of the Clock on Saturday, the 28th September 1963.